ವಿಷಯ :– ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಉಪ ವಿಭಾಗವನ್ನು ಬಳ್ಳಾರಿ ಜಿಲ್ಲೆ ಹಗರೀ ಬೊಮ್ಮನಹಳ್ಳಿಯಲ್ಲಿ ಪ್ರಾರಂಭಿಸುವ ಬಗ್ಗೆ.

ಪ್ರ. 176(111) ಶ್ರೀ ಕೆ. ಚನ್ನಬಸವನ ಗೌಡ (ಕೂಡ್ಲಗಿ).––ಮಾನ್ಯ ವಿದ್ಯುಚ್ಛಕ್ತಿ ಹಾಗೂ ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :––

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಉಪ ವಿಭಾಗವನ್ನು ಬಾಳ್ಳರಿ ಜಿಲ್ಲೆ ಹಗರೀ ಬೊಮ್ಮನ ಹಳ್ಳಿಯಲ್ಲಿ ಯಾವಾಗ ಪ್ರಾರಂಭ ಮಾಡಲಾಗುವುದು ?

ಶ್ರೀ ಎ. ಲಕ್ಷ್ಮಿಸಾಗರ್ ವಿದ್ಯುಚ್ಛಕ್ತಿ ಮಂತ್ರಿಗಳ ಪರವಾಗಿ (ಅಬ್ಕಾರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು) :—

ಸದ್ಯದಲ್ಲಿ ಮಂಡಳಿಯ ಮುಂದೆ ಹಗರೀಬೊಮ್ಮನಹಳ್ಳಿಯಲ್ಲಿ ಉಪವಿಭಾಗವನ್ನು ಪ್ರಾರಂಭ ಮಾಡುವ ಯೋಜನೆ ಇಲ್ಲ.

ಶ್ರೀ ಕೆ. ಚೆನ್ನಬಸವನಗೌಡ.––ಅಧ್ಯಕ್ಷರೇ ಎಲ್ಲಾ ತಾಲ್ಲೂಕುಗಳಲ್ಲಿ ಉಪ ವಿಭಾಗವನ್ನು ತೆರೆಯುತ್ತಿದ್ದು ನಮ್ಮ ತಾಲ್ಲೂಕಿನಲ್ಲಿ ತೆರೆಯುವುದಕ್ಕೆ ಕಾರಣ ಏನು ? ನಮ್ಮ ಕಡೆ ಕರೆಂಟ್ ಹೋದರೆ ವಾರ ಗಟ್ಟಲೆ ಬರುವುದಿಲ್ಲ. ಆದ್ದರಿಂದ ನಮ್ಮಲ್ಲಿ ಸಬ್ ಡಿವಿಜನರ್ ಯಾವಾಗ ಮಾಡುತ್ತೀರಿ ?

Sri A. Lakshmisagar.––There are certain norms. Minimum of three Sections are required to form a Sub-division. To form one rural Section a minimum of 5000 installations are required. Since these are not just now present, opening of a Sub-division is not feasible for the time being.

ಶ್ರೀ ಕೆ. ಚೆನ್ನಬಸವನಗೌಡ.––ನಮ್ಮಲ್ಲಿ ಸಾವಿರಾರು ಪಂಪ್ಸ್ ಇವೆ. ತಾವು ಏನೋ ನಾರ್ಮ್ಸ್ ಫುಲ್‌ಫಿಲ್ ಆಗಿಲ್ಲ ಎಂದು ಹೇಳುತ್ತೀರಿ. ಬೇರೆ ಎಲ್ಲಾ ತಾಲ್ಲೂಕುಗಳಲ್ಲೂ ಸಬ್ ಡಿವಿಜನರ್‌ಗಳು ಇದ್ದು, ನಮ್ಮ ತಾಲ್ಲೂಕಿನಲ್ಲಿ ಮಾತ್ರ ಏಕೆ ಕೊಟ್ಟಿಲ್ಲ ?

ಶ್ರೀ ಎ. ಲಕ್ಷ್ಮೀಸಾಗರ್.—ಈಗಿನ ಅಲ್ಲಿನ ಪರಿಸ್ಥಿತಿ ನಾರ್ಮ್ಸ್ ಒಳಗೇ ಬರುವುದಾದರೆ ಆ ಬಗ್ಗೆ ವಿಚಾರ ಮಾಡೋಣ.

ವಿಷಯ :– ಸೇಡಂ ಟೌನಿನಲ್ಲಿ ಕುಡಿಯುವ ನೀರನ್ನು ಕೇಂದ್ರೀಕರಿಸಲು ತೊಟ್ಟಿಯನ್ನು ನಿರ್ಮಿಸುವುದು.

ಪ್ರ. 177(11) ಶ್ರೀ ನಾಗರೆಡ್ಡಿ ಎಲ್. ಪಾಟೀಲ್ (ಸೇಡಂ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :––

ಅ. ಸೇಡಂ ನಗರದಲ್ಲಿ ಕುಡಿಯುವ ನೀರಿನ ಅಭಾವವಿದ್ದು ತೊಂದರೆಯಾಗುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ :

ಆ. ಸೇಡಂ ನಗರಕ್ಕೆ ಕಮಲಾವತಿ ನದಿಯಿಂದ ನೀರು ಸರಬರಾಜು ಆಗುತ್ತಿದ್ದರೂ ನೀರಿನ ಸೇಖರಣೆ ಮಾಡಲು ನಗರದಲ್ಲಿ 2 ಟ್ಯಾಂಕ್‌ಗಳ ಅವಶ್ಯಕತೆ ಇರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ;

ಇ. ಮೇಲ್ಕಂಡ ನಗರದಲ್ಲಿ 2ನೇ ಟ್ಯಾಂಕ್ ನಿರ್ಮಾಣ ಮಾಡುತ್ತಿದ್ದು ಅದರ ನಿರ್ಮಾಣ ಕಾರ್ಯ ನಿಲ್ಲಿಸಲು ಕಾರಣಗಳೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳ) :—

ಅ. ಬಂದಿದೆ.

ಆ. ಬಂದಿದೆ.

ಇ. ಎರಡು ಲಕ್ಷ ಗ್ಯಾಲನ್ ಸಾಮರ್ಥ್ಯದ ಮೇಲ್ಮಟ್ಟದ ನೀರು ಸಂಗ್ರಹಾಗಾರದ ಅಡಿಮಟ್ಟದವರೆಗೆ ಕೆಲಸ ಮುಗಿದಿದೆ. ಗುತ್ತಿಗೆದಾರರು ಕೆಲಸವನ್ನು ಸ್ಥಗಿತಗೊಳಿಸಿರುವುದರಿಂದ ಪುನ: ಕೆಲಸವನ್ನು ಪ್ರಾರಂಭಿಸಲು ಮಂಡಲಿಯವರಿಗೆ ಸೂಚಿಸಲಾಗಿದೆ ಹಾಗೂ ಈ ಕೆಲಸವನ್ನು ಪುನ: ಪ್ರಾರಂಭಿಸಿ ತ್ವರಿತಗತಿಯಲ್ಲಿ ಪೂರ್ಣಗೊಳಿಸಲಾಗುವುದು.

ಶ್ರೀ ನಾಗಿರೆಡ್ಡಿ ಪಾಟೀಲ್.—ಸೇಡಂ ನಗರದಲ್ಲಿ ನೀರು ಸಂಗ್ರಹ ಮಾಡತಕ್ಕ ಟ್ಯಾಂಕ್‌ನಿಂದ ಸಾಕಷ್ಟು ನೀರು ನಗರದ ಜನತೆಗೆ ದೊರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಜನತೆಗೆ ಸಾಕಷ್ಟು ನೀರು ಒದಗಿಸಲು ಹೊಸ ಬಾವಿಗಳನ್ನು ತೆಗೆಸುತ್ತೀರಾ ? ಹಾಲಿ ನೀರನ್ನು ಸರಬರಾಜು ಮಾಡುತ್ತಿದ್ದ ಹಾಲಿ ಎರಡು ಟ್ಯಾಂಕುಗಳ ಕೆಲಸವನ್ನು ನಿಲ್ಲಿಸಲು ಕಾರಣಗಳೇನು ?

ಶ್ರೀ ಎಂ. ಚಂದ್ರಶೇಖರ್.—ಸಂಬಂಧಪಟ್ಟ ಗುತ್ತಿಗೆದಾರರಿಗೆ ಮೈಯಲ್ಲಿ ಹುಷಾರಿಲ್ಲದ ಕಾರಣ ಟ್ಯಾಂಕುಗಳ ಕೆಲಸ ಸ್ಥಗಿತವಾಗಿತ್ತು, ಈಗ ಆತ ಮುಂದೆ ಬಂದಿದ್ದಾರೆ ಕೆಲಸ ಒಪ್ಪಿಸಿದ್ದೇವೆ. ಕೆಲಸ ಪ್ರಾರಂಭವಾಗಿದೆ.